ವಿತ್ತ ಸಂಚಿಕೆ
February 2024

# INSPIRE INDIA



ಶರಣ್ ಪಾಟೀಲ್
ಆರ್ಥಿಕ ತಜ್ಞರು

## ಸಲಹೆ ನಮ್ಮದು ಹೂಡಿಕೆ ನಿಮ್ಮದು

INSPIRE INDIA WEALTH PRIVATE LTD. @ 65, 'Surasa Enclave' 1st floor, Puttanna Road, Gandhi Bazar Basvanagudi, Bengaluru 560004, Ph: +91 8042129917, 9035414414. Mail: info@inspireindiafs.com Website: www.inspireindiafs.com



ಸಾಧನೆ ಮಾನ್ಯತೆಗೆ ಕಾರಣವಾಗುತ್ತದೆ. ಮಾನ್ಯತೆ ಗೌರವ ತರುತ್ತದೆ. ಗೌರವ ನಮ್ಮ ಶಕ್ತಿಯನ್ನು ಹೆಚ್ಚಿಸುತ್ತದೆ.
–ನಾರಾಯಣ ಮೂರ್ತಿ



ಪ್ರತಿದಿನವೂ ಕಲಿಯುವಂತಹ ಐಡಿಯಾಗಳ ಜೊತೆಗೆ ನಾವು ಕೆಲಸ ಮಾಡಬೇಕು. ನಾನಂತೂ ಪ್ರತಿದಿನವೂ ಕಲಿಯುತ್ತ ಹೋಗುತ್ತೇನೆ.
–ಚಂದಾ ಕೊಚಾರ್



ವಿನೂತನ ಯೋಚನೆ ಎನ್ನುವುದು ಮನಸ್ಥಿತಿ. ನಾವು ದೃಢ ಸಂಕಲ್ಪದಿಂದ ಅಂತಹ ಮನಸ್ಥಿತಿ ಸೃಷ್ಟಿ ಮಾಡಬಹುದು.
–ಎಲಾನ್ ಮಸ್ಕ್

# ಹಣಕಾಸು ಸೌಖ್ಯದ ಹಾದಿಯಲ್ಲಿ




ಹೊಸ ವರ್ಷ ಎಂದರೆ ಹೊಸ ಗಾಳಿ, ಹೊಸ ಆರಂಭ. ನಾವು ನಡೆದುಬಂದ ಹಾದಿಯ ಕಡೆಗೊಂದು ಪಕ್ಷಿನೋಟ ಬೀರಿ ಭವಿಷ್ಯದ ಕಡೆಗೆ ಹೆಜ್ಜೆ ಹಾಕುವ ಕಾಲಘಟ್ಟವಿದು. ಇಂತಹ ಸಂದರ್ಭದಲ್ಲಿ ನಮಗೆ ಬೇಕಾದುದು ಹೊಸ ದೃಷ್ಟಿಕೋನವೂ ಕೂಡ. ಧನಾತ್ಮಕ ಬದಲಾವಣೆಯ ಅಪೇಕ್ಷೆಗಳು ನಮ್ಮಲ್ಲಿ ಮೊಳೆಯಬೇಕು. ಹಾಗಾದಾಗ ಮಾತ್ರ ನಾವು ಹೊಸ ನಿರ್ಣಯಗಳನ್ನು ರೂಪಿಸಲು ಸಾಧ್ಯವಾಗುತ್ತದೆ. ಇಂತಹ ನಿರ್ಣಯಗಳು ನಮ್ಮೊಳಗೆ ಇರುವ ಹೊಸ ಅಧ್ಯಾಯಗಳ ಅನಾವರಣ ಮಾಡಬಹುದು.

ವೈಯಕ್ತಿಕ ಹಣಕಾಸನ್ನು ನಿಭಾಯಿಸುವ ಸಂದರ್ಭದಲ್ಲಿಯೂ ಕೂಡ ಇದೇ ಅಂಶಗಳನ್ನು ಗಮನಿಸಬೇಕು. 2024 ಹೊಸ ಹೆಜ್ಜೆ ಇಟ್ಟು ಬಂದಿರುವುದರಿಂದ ಹಣಕಾಸು ಸೌಖ್ಯದ ಬಗೆಗಿನ ನಮ್ಮ ನಿಲುವನ್ನು ಪರಿಷ್ಕರಿಸುವ ಅಗತ್ಯವಿದೆ. ಈ ಹಂತದಲ್ಲಿ ಕೇವಲ ನಾವು ಕೈಗೊಳ್ಳುವ ಹಣಕಾಸು ನಿರ್ಣಯಗಳನ್ನು ಮಾತ್ರ ಅವಲಂಭಿಸಿಕೊಳ್ಳುವುದಕ್ಕಿಂತ ನಮ್ಮ ಜೀವನ ಶೈಲಿಗಳಲ್ಲಿಯೂ ಬದಲಾವಣೆಗಳನ್ನು ಮಾಡಿಕೊಂಡು ಸಣ್ಣಪುಟ್ಟ ಅಭ್ಯಾಸಗಳ ಶಕ್ತಿ ಏನು ಎಂಬುದನ್ನು ಗ್ರಹಿಸುವುದು ಉತ್ತಮ. ನಮ್ಮ ಹಣಕಾಸು ಭವಿಷ್ಯಕ್ಕಾಗಿ ನಾವು ಅಳವಡಿಸಿಕೊಳ್ಳಬಹುದಾದ ಕೆಲವು ಅಭ್ಯಾಸಗಳು ಯಾವುದೆಂದು ನೋಡೋಣ.


**ಗುರಿ ಆಧಾರಿತ ಹೂಡಿಕೆ:** ಹಣಕಾಸು ಗು–ರಿಗಳನ್ನು ನಿಗದಿಪಡಿಸುವುದರ ಮೂಲಕ ಇದನ್ನು ಆರಂಭಿಸೋಣ. ಪ್ರತಿಯೊಬ್ಬರಿಗೂ ಹಣವನ್ನು ಸಂಪಾದಿಸಬೇಕು, ಶ್ರೀಮಂತರಾಗಬೇಕು, ಹಣ–ಕಾಸು ವಿಚಾರದಲ್ಲಿ ಸರ್ವಸ್ವತಂತ್ರರಾಗಬೇಕು ಎಂಬ ಅಪೇಕ್ಷೆ ಇದ್ದೇ ಇರುತ್ತದೆ. ಆದರೆ ಗುರಿಗಳು ಸ್ಪಷ್ಟವಾಗಿ ಇಲ್ಲದೇ ಹೋದರೆ ನಮ್ಮೊಳಗೆ ದ್ವಂದ್ವಗಳು ಹುಟ್ಟಿಕೊಳ್ಳುತ್ತವೆ. ಅನಿಶ್ಚಿತತೆಗೆ ಕಾರಣವಾಗುತ್ತದೆ. ಹಣಕಾಸು ಗುರಿಯನ್ನು ಸಾಧಿಸಬೇಕಾದರೆ ಐದು ಬಹುಮುಖ್ಯ ಅಂಶಗಳನ್ನು ಪರಿಪಾಲಿಸುವುದು

## ಒಳ ಪುಟ ನೋಟ

ಹೂಡಿಕೆ ಹೊತ್ತಿನಲ್ಲಿ ಆಸ್ತಿ ಹಂಚಿಕೆ ಗೊಂದಲ ಬೇಡ 3



ಕಾರ್ ವಿಮೆಗೆ ಆಧುನಿಕತೆಯ ಟಚ್ 5



ಮರೆಯಬಾರದು. ಅವುಗಳೆಂದರೆ ನಿರ್ದಿಷ್ಟವಾದುದು, ಅಳತೆಗೆ ಸಿಕ್ಕಬಹುದಾದುದು, ಸಾಧಿಸಬಹುದಾದುದು, ವಸ್ತುನಿಷ್ಠವಾದುದು ಮತ್ತು ಕಾಲಮಿತಿಯಿಂದ ಕೂಡಿದ್ದು. ಇವುಗಳನ್ನು ನಾವು ಇಂಗ್ಲಿಷ್‌ನಲ್ಲಿ ಖಒಂಖಖ ಗುರಿಗಳು ಎಂದು ಕರೆಯುತ್ತೇವೆ. ಇಂತಹ ಗುರಿಗಳನ್ನು ಮುಂದಿಟ್ಟುಕೊಂಡು ಕಾರ್ಯರೂಪಕ್ಕೆ ತರಬಹುದಾದ ಯೋಜನೆಯನ್ನು ರೂಪಿಸಲು ಸಾಧ್ಯವಾಗುತ್ತದೆ. ಇದರ ಮೂಲಕ ನಮ್ಮ ಗುರಿಗಳನ್ನು ಸಾಧಿಸಲು ಗಡುವು



ನಿಗದಿ ಮತ್ತು ಸಾಕಷ್ಟು ಪ್ರಮಾಣದ ಹೂಡಿಕೆ ಮಾಡಲು ಸುಲಭವಾಗುತ್ತದೆ.

**ಬಜೆಟ್ ನಿಗದಿ:** ಮಾಡಬೇಕಾದ ಪಾವತಿಗಳನ್ನು ಸಕಾಲದಲ್ಲಿ ಇತ್ಯರ್ಥ ಮಾಡಲು ಮತ್ತು ಹಣಕಾಸು ಗುರಿಗಳ ಕಡೆಗೆ ನಿರಂತರ ನಡೆಯನ್ನು ಕಾಯ್ದುಕೊಳ್ಳಲು ಪ್ರತಿ ತಿಂಗಳೂ ನಿರ್ದಿಷ್ಟವಾದ ಬಜೆಟ್ ನಿಗದಿ ಮಾಡುವುದು ವ್ಯವಸ್ಥಿತವಾದ ವಿಧಾನ. ಹಾಗಂತ ಕೇವಲ ಬಜೆಟ್ ರೂಪಿಸಿದರೆ ಮಾತ್ರ ಸಾಕಾಗುವುದಿಲ್ಲ. ಬಜೆಟ್ ಮೇಲೆ ನಿಗಾ ಇಡಲು ನಾವು ಮಾಡುವ ಖರ್ಚುಗಳ ಕಡೆಗೂ ಗಮನ ಹರಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಖರ್ಚುಗಳ ಜಾಡು ಹಿಡಿಯುವುದರಿಂದ ನಮ್ಮ ಹಣಕಾಸು ಅಭ್ಯಾಸಗಳ ಬಗೆಗೆ ಮೌಲ್ಯಯುತವಾದ ಒಳನೋಟ ದಕ್ಕುತ್ತದೆ ಮತ್ತು ಬಜೆಟ್‌ಗೆ ಬೇಕಾದ ಹೊಂದಾಣಿಕೆಗಳನ್ನು ಮಾಡಿಕೊಳ್ಳಬಹುದು. ಇದರಿಂದ ಹಣಕಾಸಿನ ಬಗ್ಗೆ ನಿಮಗೊಂದು ಶಿಸ್ತು ಬೆಳೆಯುವುದಲ್ಲದೆ ಸೂಕ್ತವಾದ ಕಾರ್ಯತಂತ್ರಗಳನ್ನು ರೂಪಿಸಲು ಅನುಕೂಲವಾಗುತ್ತದೆ.

**ತುರ್ತುನಿಧಿ ಮತ್ತು ವಿಮಾ ಯೋಜನೆ:** ಯಾರದ್ದೇ ಜೀವನದಲ್ಲಿ ನಿಶ್ಚಿತವಾದುದು ಅನಿಶ್ಚಿತತೆ. ಹಾಗಾಗಿ ಯಾವತ್ತೂ ಇಂತಹ ಅನಿಶ್ಚಿತತೆಗಳನ್ನು ನಿಭಾಯಿಸಲು ಬೇಕಾದ ಯೋಜನೆಯನ್ನು ರೂಪಿಸಬೇಕು. ಇಂತಹ ಕಾಲದಲ್ಲಿ ತುರ್ತುನಿಧಿ ಇಲ್ಲದೇ ಹೋದರೆ ಅನಿವಾರ್ಯವಾಗಿ ಸಾಲವನ್ನು ಆಯ್ಕೆ ಮಾಡಿಕೊಳ್ಳಬೇಕಾದ ಸಂದರ್ಭ ಬರಬಹುದು ಅಥವಾ ಇನ್ನೂ ಕೆಟ್ಟದೆಂದರೆ ನಿರ್ದಿಷ್ಟ ಅಗತ್ಯಗಳಿಗೆಂದೇ ನಿಗದಿಪಡಿಸಲಾದ ಹಣಕಾಸು ನಿಧಿಯನ್ನು ಖಾಲಿ ಮಾಡುವುದು. ಇದು ನಿಮ್ಮ ಸಂಪತ್ತು ಸೃಷ್ಟಿಯ ಇಡೀ ಜರ್ನಿಯನ್ನು ಹಾಳುಗೆಡಹಬಹುದು.ಅನಿರೀಕ್ಷಿತ ಖರ್ಚುಗಳನ್ನು ನಿಭಾಯಿಸಲು ತುರ್ತು ನಿಧಿ ಅಗತ್ಯವಿರುವುದು ಹೌದಾದರೂ ಸುದೀರ್ಘಾವಧಿ ಹಣಕಾಸು ಪರಿಣಾಮಗಳನ್ನು ತಹಬಂದಿಗೆ ತರಲು ವಿಮೆ ಕೂಡ ಉತ್ತಮ ಮಾರ್ಗ. ಅಪಘಾತ, ಕಾಯಿಲೆ ಅಥವಾ ಮನೆಯ ಯಜಮಾನನ ಸಾವು ಮುಂತಾದ ಜೀವನದ ಅನಿವಾರ್ಯ ಅವಘಡಗಳಿಂದ ಪಾರಾಗಲು ಇದರಿಂದ ಸಾಧ್ಯವಾಗುತ್ತದೆ. ವಿಮೆ ಹಾಗೂ ತುರ್ತು ನಿಧಿ ಎರಡೂ ನಿಮ್ಮ ಹಣಕಾಸಿನ ಆರೋಗ್ಯದ ಎರಡು ಸ್ತಂಭಗಳಿದ್ದ ಹಾಗೆ. ಅವು ಸಂಭಾವ್ಯ ಹಣಕಾಸು ಅಸ್ಥಿರತೆಯಿಂದ ನಿಮ್ಮನ್ನು ರಕ್ಷಿಸುತ್ತವೆ.

**ಹೂಡಿಕೆಗಾಗಿ ವೆಚ್ಚ:** "ಖರ್ಚಾಗಿ ಉಳಿದಿದ್ದನ್ನು ಉಳಿತಾಯ ಮಾಡಬೇಡ, ಬದಲಾಗಿ ಉಳಿತಾಯ ಮಾಡಿ ಉಳಿದಿದ್ದನ್ನು ಖರ್ಚು ಮಾಡು." ತಾವು ಮಾಡುವ ಎಲ್ಲ ವೆಚ್ಚಗಳ ಮೇಲೆ ನಿಗಾ ಇಡಲು ಒಂದು ಪ್ರಶ್ನೆಯನ್ನು ಸದಾ ಕೇಳಿಕೊಳ್ಳಬೇಕು– 'ಇದು ನಿಜಕ್ಕೂ ಅಗತ್ಯವಿದೆಯೇ? ಅಥವಾ ಇಂತಹುದನ್ನು ತಪ್ಪಿಸಲು ಸಾಧ್ಯವಿದೆಯೇ?' ಹೀಗೆ ಮಾಡುವುದರಿಂದ ಅನಗತ್ಯ ವೆಚ್ಚಗಳನ್ನು ಕಡಿತ ಮಾಡಬಹುದು ಮತ್ತು ತನ್ನ ಜೀವನಶೈಲಿಗಳಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬಹುದು. ಉದಾಹರಣೆಗೆ, ನಿಮ್ಮ ವಿರಾಮದ ಚಟುವಟಿಕೆಗಳಿಗೆ ಮಾಸಿಕ 10 ಸಾವಿರ ರೂ. ಖರ್ಚು ಮಾಡುತ್ತಿದ್ದರೆ ಅದರಲ್ಲಿ ಶೇ.10ರಷ್ಟು ಕಡಿತ ಮಾಡಿ ಮತ್ತು ಆ 1000 ರೂ. ಹೂಡಿಕೆ ಮಾಡಿ. ಮುಂದೆ ಅದರಿಂದ ಆಗುವ ಲಾಭ ಬಹಳ ದೊಡ್ಡದು. ಈ ಬಗ್ಗೆ ನಿಮಗೆ ನಿರ್ದಿಷ್ಟವಾಗಿ ಹೇಳುವುದಾದರೆ, 15 ವರ್ಷಗಳ ಹಿಂದೆ ಈಕ್ವಿಟಿ ಮ್ಯುಚ್ಯುಯಲ್ ಫಂಡ್‌ನಲ್ಲಿ 1000 ರೂ. ಎಸ್ಐಪಿ ಮಾಡಿದ್ದರೆ ಅದು 5,64,120 ರೂ.ಗಳಷ್ಟು ದೊಡ್ಡ ನಿಧಿಯಾಗಿ ಬೆಳೆದಿರುತ್ತದೆ. ಅಂದರೆ ಶೇ.14.01ರಷ್ಟು ಏರಿಕೆ. (ಮೂಲ: Sensex TRI).

**ಸಕಾಲದಲ್ಲಿ ಸಾಲಗಳ ಪಾವತಿ:** ಭದ್ರತೆ ಇಲ್ಲದೆ ಇರುವ ಸಾಲಗಳು ಮತ್ತು ಪಾವತಿ ಮಾಡದೇ ಇರುವ ಕ್ರೆಡಿಟ್ ಕಾರ್ಡ್ ಬಾಕಿಗಳು ಸಂಪತ್ತು ಸೃಷ್ಟಿಯ ದಾರಿಯಲ್ಲಿ ಅತ್ಯಂತ ನಿರ್ಣಾಯಕ. ಆಗಾಗ ಇವುಗಳನ್ನು 'ಕೆಟ್ಟ ಸಾಲಗಳು' ಎಂದು ನಿರ್ಧರಿಸಲಾಗುತ್ತದೆ. ಇಂತಹ ಸಾಲಗಳನ್ನು ಅಥವಾ ಇನ್ನಿತರ ಯಾವುದೇ ಬಾಕಿಗಳನ್ನು ಪೂರ್ತಿಯಾಗಿ ಅಥವಾ ಅವು ತಲೆ ಎತ್ತಿದಾಗಲೆಲ್ಲ ಪಾವತಿ ಮಾಡುವುದು ಉತ್ತಮ. ಇದು ಕೇವಲ ನಿಮ್ಮ ಹಣಕಾಸು ಆರೋಗ್ಯದ ಮೇಲೆ ಪರಿಣಾಮ ಬೀರುವುದು ಮಾತ್ರವಲ್ಲದೆ ಉತ್ತಮ ಕ್ರೆಡಿಟ್ ಸ್ಕೋರ್ ಕಾಯ್ದುಕೊಳ್ಳದೇ ಇರುವಂತೆ ಮಾಡುತ್ತದೆ. ಸಕಾಲದಲ್ಲಿ ಮಾಡದೇ ಇರುವ ಪಾವತಿಗಳು ಮತ್ತು ಕರ್ತವ್ಯಲೋಪಗಳು ನಿಮ್ಮ ಕ್ರೆಡಿಟ್ ಸ್ಕೋರ್ ಪಾಲಿಗೆ ಕಂಟಕವಾಗಿ ಪರಿಣಮಿಸುತ್ತವೆ. ಇದರಿಂದ ಉತ್ತಮ ಬಡ್ಡಿ ದರದ ಅವಕಾಶಗಳನ್ನು ಕಳೆದುಕೊಳ್ಳುವಂತೆ ಮಾಡುತ್ತದೆ ಅಥವಾ ಮುಂದಿನ ದಿನಗಳಲ್ಲಿ ಸಾಲವನ್ನು ಪಡೆದುಕೊಳ್ಳುವುದು ಕಷ್ಟವಾಗಬಹುದು.

**ಸ್ವಯಂಚಾಲಿತ ಹೂಡಿಕೆ:** ಮ್ಯುಚ್ಯುಯಲ್ ಫಂಡ್‌ಗಳಲ್ಲಿ ಎಸ್ಐಪಿಯಂತಹ ಸ್ವಯಂಚಾಲಿತ ಹೂಡಿಕೆಗಳನ್ನು ಮಾಡುವುದರಿಂದ ನಿಮ್ಮಲ್ಲಿ ಹಣಕಾಸಿನ ಶಿಸ್ತಿಗೆ ದಾರಿ ಮಾಡಿಕೊಡುತ್ತದೆ. ಮ್ಯುಚ್ಯುಯಲ್ ಫಂಡ್‌ಗಳಲ್ಲಿ ಎಸ್ಐಪಿ ಮಾಡುವುದರಿಂದ ನಿಮ್ಮ ಹಣಕಾಸು ಅಗತ್ಯಗಳಿಗೆ ಸಣ್ಣ ಸಣ್ಣ ಮೊತ್ತಗಳನ್ನು ಹೂಡಿಕೆ ಮಾಡಬಹುದು ಮತ್ತು ಕಾಲಕ್ರಮೇಣ ವ್ಯವಸ್ಥಿತವಾಗಿ ಒಂದು ಫಂಡ್ ನಿರ್ಮಾಣಕ್ಕೆ ಕಾರಣವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಪ್ರತಿ ತಿಂಗಳೂ ಹೂಡಿಕೆಯನ್ನು ನೆನಪಿಟ್ಟುಕೊಳ್ಳಬೇಕಾದ ಅಗತ್ಯವೇನೂ ಇರುವುದಿಲ್ಲ. ನಿಮಗೆ ಅನುಕೂಲಕರವಾದ ಸ್ವಯಂಚಾಲಿತ ಹೂಡಿಕೆಯಿಂದಾಗಿ ನಿಮ್ಮ ಹಣಕಾಸು ಅಗತ್ಯಗಳ ಮೇಲೆ ನಿಗಾ ಇಡಲು ಸಾಧ್ಯವಾಗುತ್ತದೆ.

ನಿವೃತ್ತಿ ಯೋಜನೆ: ಪಿಜಿಐಎಂ ಮ್ಯುಚ್ಯುಯಲ್ ಫಂಡ್‌ಗಾಗಿ 2020ರಲ್ಲಿ ನಡೆಸಿದ ಒಂದು ಸಮೀಕ್ಷೆ ಪ್ರಕಾರ, ಶೇ.51ರಷ್ಟು ಭಾರತೀಯರು ನಿವೃತ್ತಿ ಯೋಜನೆಯ ಬಗ್ಗೆ ತಲೆಕೆಡಿಸಿಕೊಳ್ಳಲು ಹೋಗುವುದಿಲ್ಲ. ಅಂದರೆ ಸಿದ್ಧ ಸೂತ್ರಗಳನ್ನು ಅವರು ರೂಪಿಸುವುದಿಲ್ಲ. ಕೇವಲ ಐವರಲ್ಲಿ ಒಬ್ಬರು ಮಾತ್ರ ನಿವೃತ್ತಿ ಯೋಜನೆಯನ್ನು ರೂಪಿಸುವಾಗ ಹಣದುಬ್ಬರವನ್ನು ಗಣನೆಗೆ ತೆಗೆದುಕೊಳ್ಳುತ್ತಾರೆ (ಮೂಲ: ಬ್ಯುಸಿನೆಸ್ ಟುಡೆ). ಇದು ಭಾರತೀಯರು ನಿವೃತ್ತಿಯ ವಿಚಾರದಲ್ಲಿ ಎಷ್ಟು ಅಸಡ್ಡೆ ತೋರಿಸುತ್ತಾರೆ ಎಂಬುದಕ್ಕೆ ಉದಾಹರಣೆಯಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಅನೇಕ ಮಂದಿ ತಮ್ಮ ನಿವೃತ್ತಿಗೆ ಮಕ್ಕಳನ್ನು ಅವಲಂಬಿಸಿಕೊಂಡಿದ್ದಾರೆ. ನ್ಯಾನೋ ಕುಟುಂಬಗಳ ಪರಿಕಲ್ಪನೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇರುವುದರಿಂದ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ತಮ್ಮ ನಿವೃತ್ತಿ ಯೋಜನೆಯನ್ನು ರೂಪಿಸುವುದು ಅತ್ಯಂತ ಮುಖ್ಯ. ನಿವೃತ್ತಿ ಯೋಜನೆಯು ಹಣಕಾಸು ಸ್ವಾತಂತ್ರ್ಯದ ಮೂಲಾಧಾರವಾಗಿದೆ. ಇದರಿಂದ ನಿವೃತ್ತಿಯ ಸುವರ್ಣ ವರ್ಷಗಳ ಅವಧಿಯಲ್ಲಿ ಒತ್ತಡ ರಹಿತ ಜೀವನ ಸಾಗಿಸಲು ಸಾಧ್ಯವಾಗುತ್ತದೆ.


**ಹಣಕಾಸು ಮಾರ್ಗದರ್ಶನ:** ಸಮರ್ಪಕವಾದ ಹೂಡಿಕೆ ನಿರ್ಧಾರಗಳನ್ನು ಮಾಡುವುದು ನಿಜಕ್ಕೂ ಕಷ್ಟದ ಕೆಲಸ. ಈ ಜರ್ನಿಯಲ್ಲಿ ಸೂಕ್ತವಾದ ಮಾರ್ಗದರ್ಶನಗಳನ್ನು ಪಡೆದುಕೊಳ್ಳಲು ಇರುವ ದಾರಿ ಎಂದರೆ ಹಣಕಾಸು ಸಲಹೆಗಾರರನ್ನು ಸಂಪರ್ಕಿಸುವುದು. ನಿಮ್ಮ ಹಣಕಾಸಿನ ಅಗತ್ಯಗಳು, ನಿಮ್ಮ ರಿಸ್ಕ್ ಪ್ರೊಫೈಲ್‌ನ್ನು ಅರ್ಥ ಮಾಡಿಕೊಂಡು ಸಂಪತ್ತು ರೂಪಿಸುವ ಪಯಣದಲ್ಲಿ ಇವರು ನಿಮಗೆ ನೆರವಾಗುತ್ತಾರೆ. ಮ್ಯುಚ್ಯುಯಲ್ ಫಂಡ್ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುವಾಗ ಮ್ಯುಚ್ಯುಯಲ್ ಫಂಡ್ ವಿತರಕರ ಜ್ಞಾನದ ಲಾಭವನ್ನು ಪಡೆದುಕೊಳ್ಳಬಹುದು ಉತ್ತಮ.

**ಬಾಟಮ್‌ಲೈನ್:** ನಿಮ್ಮ ಹಣಕಾಸಿನ ಆರೋಗ್ಯದಲ್ಲಿ ಧನಾತ್ಮಕವಾದ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದು ಹಣಕಾಸಿನ ಯಶಸ್ಸಿನ ದೃಷ್ಟಿಯಿಂದ ಅತ್ಯಂತ ಮುಖ್ಯ. ಜೀವನಶೈಲಿಗಳನ್ನು ಸೂಕ್ಷ್ಮ ಹೊಂದಾಣಿಕೆ ಮತ್ತು ಉಳಿತಾಯದ ಅಭ್ಯಾಸಗಳು ಬಹಳ ದೊಡ್ಡ ವ್ಯತ್ಯಾಸವನ್ನು ಉಂಟುಮಾಡುತ್ತವೆ. ಇದು ನಿಮ್ಮ ಹೂಡಿಕೆ ವಿಧಾನದಲ್ಲಿ ಶಿಸ್ತು ಮತ್ತು ನಿರಂತರತೆಯನ್ನು ತಂದುಕೊಡುತ್ತದೆ. ಮೇಲೆ ವಿವರಿಸಿರುವ ಅನೇಕ ಸೂತ್ರಗಳು ಉತ್ತಮ ಹಣಕಾಸು ಆರೋಗ್ಯದ ಅಭ್ಯಾಸಗಳಲ್ಲಿ ಮೂಲಭೂತ ಅಂಶಗಳಾಗಿವೆ.

# ಹೂಡಿಕೆ ಹೊತ್ತಿನಲ್ಲಿ ಆಸ್ತಿ ಹಂಚಿಕೆಯ ಗೊಂದಲ ಬೇಡ



**ಹೂಡಿಕೆ ಮಾಡುವ ಆಸ್ತಿಗಳಲ್ಲಿ ಬಹುರೂಪವನ್ನು ಕಾಯ್ದುಕೊಳ್ಳಬೇಕು. ಇದು ಎಲ್ಲ ಹೂಡಿಕೆದಾರರೂ ಒಪ್ಪಿಕೊಳ್ಳುವ ಸಂಗತಿ. ಆದಾಯ ಮತ್ತು ಅಪಾಯದ ನಡುವೆ ಸಮರ್ಪಕ ಸಮತೋಲನ ಕಾಪಾಡಲು ಹೂಡಿಕೆದಾರರಿಗೆ ಉತ್ತಮ ಸಾಧನ ಇದಾಗಿದೆ.**




**ಪ್ರತಿ** ವರ್ಷ ಉತ್ತಮ ನಿರ್ವಹಣೆಯನ್ನು ತೋರುವ ಆಸ್ತಿಯಲ್ಲಿ ಹೂಡಿಕೆ ಮಾಡಬೇಕು ಎಂಬುದು ಪ್ರತಿಯೊಬ್ಬರ ಬಯಕೆಯಾಗಿರುತ್ತದೆ. ಆದರೆ ವಾಸ್ತವದಲ್ಲಿ ಯಾವತ್ತೂ ಉತ್ತಮ ಆಸ್ತಿ ವರ್ಗವನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಿಲ್ಲ. ಹಾಗಾಗಿಯೇ ಬಂಡವಾಳ ವೈವಿಧ್ಯೀಕರಣ ಮುಖ್ಯವಾಗುತ್ತದೆ. ಅಂದರೆ ನಮ್ಮಲ್ಲಿರುವ ಬಂಡವಾಳವನ್ನು ವಿವಿಧ ರೂಪದಲ್ಲಿ ಹೂಡಿಕೆ ಮಾಡುವುದು. ಹಾಗಾಗಿಯೇ "ಹೂಡಿಕೆಯಲ್ಲಿ ಬಂಡವಾಳ ವೈವಿಧ್ಯೀಕರಣವೊಂದೇ ಉಚಿತ ಭೋಜನ" ಎಂದು ಹ್ಯಾರಿ ಮಾರ್ಕೋವಿಝ್ ಹೇಳಿರೋದು. ಅಂದರೆ ಆಸ್ತಿಗಳ ಶ್ರೇಣಿಗಳಲ್ಲಿ ವೈವಿಧ್ಯತೆಯನ್ನು ಕಾಯ್ದುಕೊಂಡರೆ ಒಟ್ಟಾರೆ ಅಪಾಯ ತಗ್ಗಿಸಬಹುದು ಮತ್ತು ಕಾಲಕ್ರಮೇಣ ಹೆಚ್ಚು ಸ್ಥಿರತೆಯನ್ನು ಸಾಧಿಸಬಹುದು ಹಾಗೂ ನಿರಂತರ ಆದಾಯವನ್ನೂ ಪಡೆಯುತ್ತಿರಬಹುದು.

ಸಾಮಾನ್ಯವಾಗಿ ಎಲ್ಲ ಹೂಡಿಕೆದಾರರೂ ಒಪ್ಪಿಕೊಳ್ಳುವ ಸಂಗತಿ ಏನೆಂದರೆ ತಾವು ಹೂಡಿಕೆ ಮಾಡುವ ಆಸ್ತಿಗಳಲ್ಲಿ ಬಹುರೂಪವನ್ನು ಕಾಯ್ದುಕೊಳ್ಳಬೇಕು ಎಂದು. ಆದಾಯ ಮತ್ತು ಅಪಾಯದ ನಡುವೆ ಸಮರ್ಪಕವಾದ ಸಮತೋಲನವನ್ನು ಕಾಪಾಡಲು ಹೂಡಿಕೆದಾರ–ರಿಗೆ ಇರುವ ಉತ್ತಮ ಸಾಧನ ಇದಾಗಿದೆ. ಹೂಡಿಕೆ ಮಾಡುವ ವ್ಯಕ್ತಿಯ ರಿಸ್ಕ್ ಪ್ರೊಫೈಲ್, ಹಣಕಾಸಿನ ಗುರಿ ಮತ್ತು ಹೂಡಿಕೆಯ ವ್ಯಾಪ್ತಿಗೆ ತಕ್ಕಂತೆ ಆಸ್ತಿ ವರ್ಗಗಳನ್ನು ಬ್ಲೆಂಡ್ ಮಾಡಿ ವೈವಿಧ್ಯತೆ ಇರುವ, ಬಹುರೂಪದ ಪೋರ್ಟ್‌ಫೋಲಿಯೋವನ್ನು ರೂಪಿಸಬೇಕಾಗುತ್ತದೆ.

ಆಸ್ತಿ ಹಂಚಿಕೆಯಂತಹ ಕಾರ್ಯತಂತ್ರದ ಮೂಲಕ ಪೋರ್ಟ್‌ಫೋಲಿಯೋದ ಬಂಡವಾಳವನ್ನು ಈಕ್ವಿಟಿ, ಡೆಟ್, ನಗದು, ರಿಯಲ್ ಎಸ್ಟೇಟ್ ಮುಂತಾದ ನಾನಾ ಆಸ್ತಿ ವರ್ಗಗಳಿಗೆ ಹಂಚಿಕೆ ಮಾಡಲು ಸಾಧ್ಯವಾಗುತ್ತದೆ. ಸರಿಯಾದ ಆಸ್ತಿ ಹಂಚಿಕೆಯನ್ನು ಮಿಶ್ರಣ ಮಾಡುವುದು ಹೇಗೆ ಎಂಬುದನ್ನು ಈ ಲೇಖನದ ಮುಂದಿನ ಭಾಗದಲ್ಲಿ ನೋಡೋಣ:

**ಹೂಡಿಕೆ ಉದ್ದೇಶಗಳು:** ಹೂಡಿಕೆದಾರ ಯಾವ ಹಣಕಾಸು ಉದ್ದೇಶದಿಂದ ಹೆಚ್ಚು ಪ್ರಭಾವಕ್ಕೆ ಒಳಗಾಗಿರುತ್ತಾನೆ ಎಂಬುದರ ಮೇಲೆ ಆಸ್ತಿ ಹಂಚಿಕೆಯ ಆಯ್ಕೆ ಮಾಡಬೇಕಾಗುತ್ತದೆ. ಪ್ರತಿಯೊಬ್ಬ ಹೂಡಿಕೆದಾರನ ಆಕಾಂಕ್ಷೆಗಳು ವಿಭಿನ್ನವಾಗಿರಬಹುದು. ಇದರಲ್ಲಿ ಮನೆ ಖರೀದಿಗಾಗಿ ಡೌನ್ ಪೇಮೆಂಟ್ ಮಾಡಲು ಬೇಕಾದಂತಹ ಅಲ್ಪಾವಧಿ ಗುರಿಗಳು ಹಾಗೂ ನಿವೃತ್ತಿಗೆ ಬೇಕಾದ ಸಂಪತ್ತನ್ನು ಸೃಷ್ಟಿಸುವ ಸುದೀರ್ಘಾವಧಿ ಗುರಿಗಳು ಇರುತ್ತವೆ. ವಿಭಿನ್ನ ರೀತಿಯ ಗುರಿಗಳನ್ನು ಮುಟ್ಟಲು ನಾನಾ ರೀತಿಯ ಹೂಡಿಕೆ ಕಾರ್ಯತಂತ್ರಗಳು ಮತ್ತು ಆಸ್ತಿ ಹಂಚಿಕೆಗಳು ಬೇಕಾಗುತ್ತವೆ. ಉದಾಹರಣೆಗೆ ಸುದೀರ್ಘಾವಧಿಗೆ ಸಂಪತ್ತನ್ನು ರೂಪಿಸಬೇಕು ಎಂದು

ಹೊರಟಾಗ ನಿಮ್ಮ ಪೋರ್ಟ್‌ಫೋಲಿಯೋದ ಬಹುತೇಕ ಭಾಗವನ್ನು ಈಕ್ವಿಟಿಯ ಕಡೆಗೆ ವಿನಿಯೋಗಿಸಬೇಕಾಗುತ್ತದೆ.

**ರಿಸ್ಕ್ ಪ್ರೊಫೈಲ್:** ಆಸ್ತಿ ಹಂಚಿಕೆಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೂ ಮೊದಲು ಯಾವುದು ರಿಸ್ಕ್ ಪ್ರೊಫೈಲ್ ಎಂದು ನಿರ್ಧರಿಸುವುದು ಅತ್ಯಂತ ಮುಖ್ಯ. ಒಬ್ಬ ಹೂಡಿಕೆದಾರ ಒಂದು ರಿಸ್ಕ್‌ನ್ನು ಎಷ್ಟರ ಮಟ್ಟಿಗೆ ಸಹಿಸಿಕೊಳ್ಳುತ್ತಾನೆ ಎಂಬುದನ್ನು ನಿರ್ಧರಿಸಬೇಕು. ಮಾರ್ಕೆಟ್‌ನಲ್ಲಿ ಉಂಟಾಗುವ ಏರಿಳಿತದ ಜೊತೆಗೆ ಎಷ್ಟು ಸ್ಥಿರವಾಗಿ ನಿಲ್ಲುತ್ತಾನೆ ಮತ್ತು ರಿಸ್ಕ್ ಹೊರೆಯನ್ನು ವಹಿಸಿಕೊಳ್ಳುವ ನಿಟ್ಟಿನಲ್ಲಿ ಯಾವ ಹಂತದ ಸ್ಥಿರತೆ ಹೊಂದಿದ್ದಾನೆ ಎಂಬುದು ಮುಖ್ಯ. ಆ ಬಳಿಕ ಹೂಡಿಕೆದಾರ ತನ್ನ ರಿಸ್ಕ್ ಸಾಮರ್ಥ್ಯವನ್ನು ಅರ್ಥ ಮಾಡಿಕೊಳ್ಳಬೇಕು. ಅಂದರೆ ನಷ್ಟವನ್ನು ಎಲ್ಲಿಯ ವರೆಗೆ ತಾಳಿಕೊಳ್ಳುವ ತಾಕತ್ತಿದೆ ಎಂಬುದು. ಇವೆರಡನ್ನು ಸಮರ್ಪಕವಾಗಿ ಗುರುತಿಸುವ ಮೂಲಕ ಒಬ್ಬ ಹೂಡಿಕೆದಾರ ತನ್ನ ರಿಸ್ಕ್ ಪ್ರೊಫೈಲ್‌ನ್ನು ರೂಪಿಸಬಹುದು. ಇದರ ಆಧಾರದಲ್ಲಿ ಆತ ತನ್ನ ಹೂಡಿಕೆಯನ್ನು ನಾನಾ ಆಸ್ತಿ ವರ್ಗಗಳಿಗೆ ಹಂಚಿಕೆ ಮಾಡಬಹುದು.

**ತೆರಿಗೆ:** ನಾನಾ ರೀತಿಯ ಆಸ್ತಿ ವರ್ಗಗಳು ವಿಭಿನ್ನವಾದ ತೆರಿಗೆ ಪರಿಣಾಮಗಳನ್ನು ಹೊಂದಿರುತ್ತವೆ. ನಾನಾ ಆಸ್ತಿ ವರ್ಗಗಳ ತೆರಿಗೆ ದಕ್ಷತೆಯು ತೆರಿಗೆಪೂರ್ವ ಆದಾಯದ ಮೇಲೆ ಪರಿಣಾಮ ಬೀರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಉದಾಹರಣೆಗೆ, ನಾನಾ ಆಸ್ತಿ ವರ್ಗಗಳ ಲಾಭಾಂಶ ಮತ್ತು ಬಂಡವಾಳ ಗಳಿಕೆ ಮೇಲಿನ ತೆರಿಗೆ ಭಿನ್ನವಾಗಿರುತ್ತದೆ. ಈ ತೆರಿಗೆ ಪರಿಣಾಮವನ್ನು ಅರ್ಥ ಮಾಡಿಕೊಳ್ಳುವ ಮೂಲಕ ಹೂಡಿಕೆದಾರ ತನ್ನ ಹೂಡಿಕೆಗಳನ್ನು ಪರಿಣಾಮಕಾರಿಯಾಗಿ ಪ್ಲಾನ್ ಮಾಡಬಹುದು.

ಯಾವುದೇ ಆಸ್ತಿಗಳ ಹಂಚಿಕೆ ನಿರ್ಧಾರವನ್ನು ಮಾಡುವುದಕ್ಕೂ ಮೊದಲು ಇನ್ನೂ ನಾನಾ ಹಣಕಾಸು ಗುರಿಗಳಿಗೆ ಉಳಿದಿರುವ ಕಾಲಾವಕಾಶ ಎಷ್ಟು ಎಂಬುದನ್ನು ಪರಿಗಣಿಸಬೇಕು. ನಿಮ್ಮ ಹಣಕಾಸು ಗುರಿಯಿಂದ ಇನ್ನೇನು ಕೆಲವೇ ವರ್ಷಗಳಷ್ಟು ದೂರವಿದ್ದೀರಿ ಎಂದಾಗ ನಿಮ್ಮ ಪೋರ್ಟ್‌ಫೋಲಿಯೋ ಪರಿವರ್ತನೆಯ ಹಂತದಲ್ಲಿದೆ ಎಂದು ಪರಿಗಣಿಸಬೇಕು. ಇಂತಹ ಸಂದರ್ಭದಲ್ಲಿ ಷೇರುಗಳಿಗೆ ಬದಲಾಗಿ ಬಾಂಡ್‌ಗಳಂತಹ ಕಡಿಮೆ ರಿಸ್ಕ್ ಇರುವ ಆಸ್ತಿಗಳ ಕಡೆಗೆ ಆಸ್ತಿ ಹಂಚಿಕೆ ಮಾಡಬೇಕು ಎಂದು ಹೆಚ್ಚಿನ ತಜ್ಞರು ಸಲಹೆ ಮಾಡುತ್ತಾರೆ.

**ಈಗ ನಾವು ನಾನಾ ಆಸ್ತಿ ವರ್ಗಗಳು ಹೇಗೆ ನಿರ್ವಹಣೆ ಮಾಡುತ್ತವೆ ಎಂಬುದನ್ನು ಗಮನಿಸೋಣ:** ಕೋಷ್ಟಕ ಗಮನಿಸಿ:


| ಅವಧಿ | ಚಿನ್ನ | ಬೆಳ್ಳಿ | ರಿಯಲ್ ಎಸ್ಟೇಟ್ | ಬಾಂಡ್ | ಕ್ರಿಸಿಲ್-ಟಿ ಬಿಲ್‌ಗಳು | ಸೆನ್ಸೆಕ್ಸ್ ಟಿಆರ್‌ಐ |
|---|---|---|---|---|---|---|
| 30ಸೆ.22 30ಸೆ.23 | 17.67% | 30.09% | 4.88% | 7.72% | 6.74% | 16.15% |
| 30ಸೆ.21 30ಸೆ.22 | 7.15% | 10.76% | 7.36% | 1.03% | 3.18% | -1.64% |
| 30ಸೆ.20 30ಸೆ.21 | -8.27% | -2.28% | -2.68% | -5.83% | -3.89% | -56.96% |

**ಮೂಲ:** **ಪ್ರಾಪರ್ಟಿ:** https://residex.nhbonline.org.in/ (50 ನಗರಗಳ ಸಂಯೋಜಿತ ಎಚ್‌ಪಿಐ)
**ಬಾಂಡ್‌ಗಳು:** ಕ್ರಿಸಿಲ್ ಸಂಯೋಜಿತ ಬಾಂಡ್ ಸೂಚ್ಯಂಕ.
**ಟಿ–ಬಿಲ್:** ಕ್ರಿಸಿಲ್ ಒಂದು ವರ್ಷದ ಟಿ–ಬಿಲ್ ಸೂಚ್ಯಂಕ
**ಚಿನ್ನ ಮತ್ತು ಬೆಳ್ಳಿ:** ಮುಂಬೈನ ಚಿನ್ನ ಮತ್ತು ಬೆಳ್ಳಿಯ ಆರ್‌ಬಿಐ ಮಾಸಿಕ ಸರಾಸರಿ ಬೆಲೆ.
**ಸೆನ್ಸೆಕ್ಸ್ ಟಿಆರ್‌ಐ:** Ace MF



ಯಾವುದೇ ಆಸ್ತಿ ವರ್ಗದ ನಿರ್ವಹಣೆಯ ಬಗ್ಗೆ ತೀರ್ಮಾನಿಸಲು ಹೂಡಿಕೆದಾರ ತಾನು ಮಾಡಿದ ಹೂಡಿಕೆಯಿಂದ ಬಂದ ಆದಾಯ ವೇನು ಎಂಬುದನ್ನು ಪರಿಗಣಿಸುತ್ತಾನೆ. ಆದ–'ರೆ ಪ್ರತಿವರ್ಷದ ದತ್ತಾಂಶದ ಪ್ರಕಾರ ಆಸ್ತಿ ವರ್ಗಗಳಲ್ಲಿ ಯಾವುದು ಮೇಲುಗೈ ಪಡೆದಿದೆ ಎನ್ನುವ ವಿಚಾರದಲ್ಲಿ ಏರಿಳಿತಗಳಿರುತ್ತವೆ. ಯಾಕೆಂದರೆ ಮಾರುಕಟ್ಟೆ ಅನೇಕ ಏರಿಳಿತಗಳಿಂದ ತುಂಬಿಹೋಗಿದೆ. 2022–23ರ ಸೆಪ್ಟೆಂಬರ್‌ನಲ್ಲಿ ಬೆಳ್ಳಿ ಅತ್ಯುತ್ತಮ ನಿರ್ವಹಣೆಯ ಆಸ್ತಿಯಾಗಿತ್ತು. ಆದರೆ 2021–22 ಮತ್ತು 2020–21ರ ಸೆಪ್ಟೆಂಬರ್‌ನಲ್ಲಿ ಬೆಳ್ಳಿ ಋಣಾತ್ಮಕ ಆದಾಯವನ್ನು ನೀಡಿತ್ತು. ಅದೇ ರೀತಿ ನಾನಾ ಆಸ್ತಿ ವರ್ಗಗಳು ಮಾರುಕಟ್ಟೆಯ ನಾನಾ ಹಂತಗಳಲ್ಲಿ ವಿಭಿನ್ನ ನಿರ್ವಹಣೆಯನ್ನು ತೋ–ರಿವೆ. ಹಾಗಾಗಿ ಹೂಡಿಕೆದಾರರು ಬಹುರೂಪದ ಪೋರ್ಟ್‌ಫೋಲಿಯೋ ಆಯ್ಕೆ ಮಾಡಿಕೊಂಡರೆ ಅವರು ಮಾಡಿದ ಹೂಡಿಕೆಯ ಹಣ ನಾನಾ ಆಸ್ತಿ ವರ್ಗಗಳಲ್ಲಿ ಹರಡಿಕೊಂಡಿರುತ್ತವೆ.

**ಬಾಟಮ್‌ಲೈನ್:** ಭರಪೂರ ಆಸ್ತಿ ಹಂಚಿಕೆಯ ನಡುವೆ ನಮ್ಮ ಹುಡುಕಾಟ ಯಾವತ್ತೂ ಮೇಲೆ ಪ್ರಸ್ತಾಪ ಮಾಡಿದ ಅಂಶಗಳ ಆಧಾರದಲ್ಲಿರಬೇಕು. ಬದಲಾಗಿ ಕೇವಲ ಅಗ್ರ ನಿರ್ವಹಣೆಯನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವುದಲ್ಲ. ಈಕ್ವಿಟಿ ಸುದೀರ್ಘಾವಧಿಯಲ್ಲಿ ಬೆಳವಣಿಗೆಯನ್ನು ಕಾಣಬಹುದು, ಚಿನ್ನವು ಸುದೀರ್ಘಾವಧಿಯಲ್ಲಿ ಬಂಡವಾಳವನ್ನು ಸುಭದ್ರಗೊಳಿಸುವಲ್ಲಿ ನೆರವಾಗಬಹುದು. ಸರಿಯಾದ ಆಸ್ತಿ ಹಂಚಿಕೆಯನ್ನು ಆಯ್ಕೆ ಮಾಡಿಕೊಳ್ಳುವುದು ಕೂಡ ಸವಾಲಿನ ಕೆಲಸ. ಹಾಗಾಗಿ ಹೂಡಿಕೆದಾರನು ಹಣಕಾಸು ಸಲಹೆಗಾರರ ಮಾರ್ಗದರ್ಶನವನ್ನು ಪಡೆದುಕೊಳ್ಳುವುದು ಉತ್ತಮ. ಈ ಸಲಹೆಗಾರರು ಹೂಡಿಕೆದಾರ–ರಿಗೆ ಮಾಹಿತಿಪೂರ್ಣವಾದ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಸಹಾಯ ಮಾಡಬಹುದು.




**ಪ್ರಮುಖ** ನಗರಗಳಲ್ಲಿ ಜನರು ಸ್ವಂತ ಕಾರು ಹೊಂದಿದ್ದರೂ ಕೂಡ ರೈಲಿನಲ್ಲಿ ಅಥವಾ ದ್ವಿಚಕ್ರ ವಾಹನದಲ್ಲಿ ಪ್ರಯಾಣ ಮಾಡಲು ಬಯಸುತ್ತಾರೆ. ಆ ಮೂಲಕ ಜನ ದಟ್ಟಣೆಯಿಂದ ತಪ್ಪಿಸಿಕೊಳ್ಳಲು ಮತ್ತು ಇಂಧನ ವೆಚ್ಚವನ್ನು ಕಡಿಮೆ ಮಾಡುವುದು ಅವರ ಉದ್ದೇಶವಾಗಿರುತ್ತದೆ. ಆದರೆ ನೀವು ಎಷ್ಟೇ ಕಿ.ಮೀ. ಕಾರು ಡ್ರೈವ್ ಮಾಡಿದರೂ ಕೂಡ ಕಾರು ವಿಮೆ ಪ್ರೀಮಿಯಂನಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಉತ್ತಮ ಚಾಲನಾ ಕೌಶಲಗಳನ್ನು ಹೊಂದಿದ ಜನರಿಗೆ ಯಾವುದೇ ಪ್ರೋತ್ಸಾಹಧನವನ್ನು ನೀಡುವುದಿಲ್ಲ. ಇದೇನು ತರ್ಕಬದ್ಧವಾದ ವಿಷಯವಲ್ಲ ಅಲ್ಲವೇ? ಆದರೆ ಮೋಟಾರ್ ವಿಮೆಯಲ್ಲಿನ ಡಿಜಿಟಲೀಕರಣ ಮತ್ತು ಆಧುನೀಕರಣಕ್ಕೆ ನಾವು ಥ್ಯಾಂಕ್ಸ್ ಹೇಳಲೇಬೇಕು. ಯಾಕೆಂದರೆ ಟೆಲಿಮ್ಯಾಟಿಕ್ಸ್ ಅಥವಾ ಬಳಕೆ ಆಧಾರದಲ್ಲಿ ವಾಹನ ವಿಮಾ ಸೌಲಭ್ಯವನ್ನು ಒದಗಿಸುವ ಹೊಸ ಆಯ್ಕೆಗಳು ಈಗ ಮಾರುಕಟ್ಟೆ ಪ್ರವೇಶಿಸಿವೆ.

### ವಿಮೆಯಲ್ಲಿ ಟೆಲಿಮ್ಯಾಟಿಕ್ಸ್ ಅಂದರೆ ಏನು?

2022ರಲ್ಲಿ ಐಆರ್‌ಡಿಎಐ ಟೆಲಿಮ್ಯಾಟಿಕ್ಸ್ ಅಥವಾ ಬಳಕೆ ಆಧಾರಿತ ವಿಮೆಗೆ ಅವಕಾಶವನ್ನು ನೀಡಿದೆ. ಇದರ ಪ್ರಕಾರ ನೀವು ಡ್ರೈವ್ ಮಾಡಿದಷ್ಟೇ ಪಾವತಿ (ಕಂಜಅ) ಮತ್ತು ಹೇಗೆ ಡ್ರೈವ್ ಮಾಡುತ್ತೀರೋ ಹಾಗೆ ಪಾವತಿ (ಕಊಜಅ) ಕಾರು ವಿಮಾ ಸೌಲಭ್ಯಗಳಿಗೆ ಅವಕಾಶ ಕಲ್ಪಿಸಲಾಗಿದೆ. ಇದಕ್ಕೂ ಮೊದಲು ಭಾರತದಲ್ಲಿ ಮೋಟಾರ್ ವಿಮೆಯಲ್ಲಿ ವಿಭಿನ್ನ ವರ್ಗದ ಗ್ರಾಹಕರು ವಿಭಿನ್ನ ಪ್ರಮಾಣದ ಅಪಾಯದ ಸೌಲಭ್ಯವನ್ನು ಹೊಂದುವ ಅವಕಾಶವನ್ನು ಪರಿಗಣಿಸುತ್ತಿರಲಿಲ್ಲ. ಅದರಿಂದಾಗಿ ಜಾಗರೂಕತೆಯಿಲ್ಲದೆ ಚಾಲನೆ ಮಾಡುವ ಡ್ರೈವರ್‌ಗಳಿಗೆ ಅತಿ ಹೆಚ್ಚಿನ ಪ್ರೀಮಿಯಂ ಮೂಲಕ ದಂಡ ವಿಧಿಸುವ ಸಾಧ್ಯತೆಗಳು ಇರಲಿಲ್ಲ.

ಈಗ ಕಾರುಗಳಲ್ಲಿ ಟೆಲಿಮ್ಯಾಟಿಕ್ಸ್ ಸಾಧನಗಳನ್ನು ಅಳವಡಿಸುವುದರಿಂದ ವಿಮಾದಾರರು ಗ್ರಾಹಕ-ನಿರ್ದಿಷ್ಟವಾದ ಬೆಲೆ ನಿಗದಿ ವಿಧಾನವನ್ನು ಅನುಸರಿಸಬಹುದು. ಅಂದರೆ ಈ ವ್ಯವಸ್ಥೆಯಲ್ಲಿ ಅನೇಕ ಅಂಶಗಳನ್ನು ಪರಿಗಣಿಸಲಾಗುತ್ತದೆ. ಅಂದರೆ ಎಷ್ಟು ದೂರ ಕಾರು ಚಾಲನೆ ಮಾಡಲಾಗಿದೆ, ವಾಹನವನ್ನು ಎಷ್ಟು ದಕ್ಷತೆಯಿಂದ ಡ್ರೈವ್ ಮಾಡಲಾಗಿದೆ, ಚಾಲನೆಯ ಅವಧಿ, ಬ್ರೇಕ್ ಬಳಸಿದ ವಿಧಾನ, ಮಾರ್ಗದ ಶಿಸ್ತು ಇತ್ಯಾದಿ ಅಂಶಗಳನ್ನು ಪರಿಗಣಿಸಿ ಪ್ರೀಮಿಯಂ ರೂಪದಲ್ಲಿ ಶುಲ್ಕ ವಿಧಿಸಲಾಗುತ್ತದೆ. ಟೆಲಿಮ್ಯಾಟಿಕ್ಸ್ ತಂತ್ರಜ್ಞಾನದಲ್ಲಿ ದೂರಸಂಪರ್ಕ ಮತ್ತು ಮಾಹಿತಿಗಳನ್ನು ಬಳಸಿಕೊಂಡು ಮೋಟಾರ್ ವಿಮೆಗೆ ಸಂಬಂಧಿಸಿದ ಅಪಾಯಗಳನ್ನು ವಿಶ್ಲೇಷಿಸಲಾಗುತ್ತದೆ. ಇದೊಂದು ಜಿಪಿಎಸ್‌ಸಹಿತ ಸಾಧನವಾಗಿದ್ದು ಇದು ವಾಹನವಿರುವ ಸ್ಥಳದ ಜಾಡನ್ನು ಪತ್ತೆ ಮಾಡುತ್ತದೆ. ಜೊತೆಗೆ ಕಾರು ಚಲಿಸುವ ವೇಗ, ಇಂಧನದ ಬಳಕೆ, ಬ್ರೇಕ್ ಹಾಕಿದ ರೀತಿ ಇತ್ಯಾದಿ ಮಾಹಿತಿಯನ್ನು ಕೂಡ ಒದಗಿಸುತ್ತದೆ.

### ಡ್ರೈವ್ ಮಾಡಿದಷ್ಟೇ ಪಾವತಿ(PAYD)

ಹಿಂದಿನ ಕಾರು ವಿಮಾ ಪಾಲಿಸಿಗಳನ್ನು ಅದರ ಭೌಗೋಳಿಕತೆ, ಮಾದರಿ, ತಯಾರಿ, ವಾಹನದ

ವಯಸ್ಸು ಮುಂತಾದ ಅಂಶಗಳ ಆಧಾರದಲ್ಲಿ ಪ್ರೀಮಿಯಂ ನಿಗದಿ ಮಾಡಲಾಗುತ್ತಿತ್ತು. ಈಗ ಎಷ್ಟು ದೂರ ಚಾಲನೆ ಮಾಡಲಾಗಿದೆ ಎಂಬುದರ ಆಧಾರದಲ್ಲಿ ಗ್ರಾಹಕರು ವಿಮೆಯನ್ನು ಪಾವತಿ ಮಾಡಲು ಡ್ರೈವ್ ಮಾಡಿದಷ್ಟೇ ಪಾವತಿ ವಿಧಾನವನ್ನು ಜಾರಿಗೆ ತರಲಾಗಿದೆ. ಇದರ ಪ್ರಕಾರ ಯಾರು ಕಾರುಗಳನ್ನು ಅತಿ ಕಡಿಮೆ ಡ್ರೈವ್ ಮಾಡುತ್ತಾರೋ ಅಷ್ಟು ಕಡಿಮೆ ಪ್ರೀಮಿಯಂ ಪಾವತಿ ಮಾಡಬಹುದು. ಅಂದರೆ ಯಾರು ರಸ್ತೆಯಲ್ಲಿ ಹೆಚ್ಚು ಚಾಲನೆ ಮಾಡುವುದಿಲ್ಲವೋ ಅವರಿಗೆ ಅಪಘಾತವಾಗುವ ಅಪಾಯ ಕೂಡ ಕಡಿಮೆ. ಹಾಗಾಗಿ ಇದು ಅವರ ಕಾರು ವಿಮೆ ಪ್ರೀಮಿಯಂಗೂ ಅನ್ವಯವಾಗಬೇಕು ಎನ್ನುವ ಕಾರಣಕ್ಕೆ ಇದನ್ನು ಜಾರಿಗೆ ತರಲಾಗಿದೆ.

ಈ ಹಿನ್ನೆಲೆಯಲ್ಲಿ ನಾನಾ ಕಿ.ಮೀ. ಮಿತಿಗಳಿಗೆ ತಕ್ಕಂತೆ ವಿಮಾ ಕಂಪನಿಗಳು ಸ್ಲಾಬ್‌ಗಳನ್ನು ನಿಗದಿ ಮಾಡಿದ್ದು ಗ್ರಾಹಕರು ಪಾಲಿಸಿ ಖರೀದಿ ಅಥವಾ ನವೀಕರಣ ಮಾಡುವ ಸಂದರ್ಭದಲ್ಲಿ ತಮಗೆ ಲಗತ್ತಾದುದನ್ನು ಆಯ್ಕೆ ಮಾಡಿಕೊಳ್ಳಬಹುದು. ಅಂದರೆ ಉದಾಹರಣೆಗೆ 5000 ಕಿ.ಮೀ. ಮಿತಿ, 7500 ಕಿ.ಮೀ. ಮಿತಿ ಅಥವಾ 10000 ಕಿ.ಮೀ. ಮಿತಿ. ಒಂದು ವೇಳೆ ಈ ಮಿತಿಯೂ ಮುಗಿದು ಹೋದರೆ 500, 1000 ಮತ್ತು 1500 ಕಿ.ಮೀ. ರೂಪದಲ್ಲಿ ಹೆಚ್ಚುವರಿ ಕಿ.ಮೀ.ಗಳ ಟಾಪ್–ಅಪ್ ಮಾಡಿಸಿಕೊಳ್ಳಬಹುದು.

PAYDಯಲ್ಲಿರುವ ಪ್ರಯೋಜನಗಳು ಹೀಗಿವೆ:

1. ಕಾರಿನ ವೇಗದ ಮೇಲ್ವಿಚಾರಣೆ ಮತ್ತು ಅದು ಸದ್ಯ ಇರುವ ಸ್ಥಳದ ಜಾಡು ಹಿಡಿಯಬಹುದು.

2. ಉತ್ತಮ ಚಾಲಕರಿಗೆ ಪ್ರೀಮಿಯಂನಲ್ಲಿ ರಿಯಾಯಿತಿ ಮತ್ತು ಗ್ರಾಹಕರಿಗೆ ತಕ್ಕಂತೆ ಪಾಲಿಸಿ.

3. ಇಂತಹ ಸಾಧನಗಳನ್ನು ಅಳವಡಿಸುವುದರಿಂದ ಕಳ್ಳತನವಾಗುವುದನ್ನು ತಪ್ಪಿಸಬಹುದು ಮತ್ತು ನೈಜ ಅವಧಿಯ ಆಧಾರದಲ್ಲಿ ವಾಹನವಿರುವ ಸ್ಥಳವನ್ನು ಪತ್ತೆ ಮಾಡಬಹುದು. ಇದರಿಂದ ಉತ್ತಮ ಗ್ರಾಹಕ ಸೇವೆ ಮತ್ತು ಗ್ರಾಹಕರಿಗೆ ಹೆಚ್ಚಿನ ತೃಪ್ತಿ ಒದಗಿಸಲು ಸಾಧ್ಯವಾಗುತ್ತದೆ.

ಇತರ ಮೋಟಾರ್ ಪಾಲಿಸಿಗಳಿಗೆ ಹೋಲಿಸಿದರೆ ಹೊಸದಾಗಿ ಪರಿಚಯಿಸಲಾದ ಸೌಲಭ್ಯಗಳು/ಆ್ಯಡ್–ಆನ್‌ಗಳು ಗ್ರಾಹಕರಿಗೆ ಹೆಚ್ಚು ನಿಯಂತ್ರಣ ಹೊಂದುವ ಹಾಗೂ ತಮ್ಮ ಮೋಟಾರ್ ವಿಮಾ ಪ್ರೀಮಿಯಂಗಳಲ್ಲಿ ಉತ್ತಮ ಉಳಿತಾಯ ಮಾಡುವ ರೀತಿಯಲ್ಲಿ ರೂಪಿಸಲಾಗಿದೆ.

**ಕ್ಲೈಮ್ ಮಾಡುವ ಪ್ರಕ್ರಿಯೆ:** ಪಾಲಿಸಿಯಲ್ಲಿ ಕ್ಲೈಮ್‌ಗೆ ಅರ್ಜಿ ಹಾಕಿದರೆ ಆಯ್ಕೆ ಮಾಡಿಕೊಂಡ ಸ್ಲಾಬ್‌ನ ಪ್ರಕಾರ ವಾಹನವು ಘೋಷಿತ ಪ್ರದೇಶದ ವ್ಯಾಪ್ತಿಯಲ್ಲಿಯೇ ಇರಬೇಕು. ಉದಾಹರಣೆಗೆ, ನೀವು 7500 ಕಿ.ಮೀ. ವ್ಯಾಪ್ತಿಯನ್ನು ಆಯ್ಕೆ ಮಾಡಿಕೊಂಡಿದ್ದರೆ ಕ್ಲೈಮ್ ಮಾಡುವ ಸಂದರ್ಭದಲ್ಲಿ ಕಾರು ದೂರದ ಮಿತಿಯನ್ನು ಮೀರಿರಬಾರದು. ನಿಮ್ಮ ಕಾರು ಆ ಮಿತಿಯೊಳಗೆ ಇದ್ದರೆ ಸಾಮಾನ್ಯ ಪಾಲಿಸಿ ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟು, ಪ್ರಮಾಣೀಕೃತ ಸಮಗ್ರ ಕಾರ್ ವಿಮಾ ಪಾಲಿಸಿಯ ರೀತಿಯಲ್ಲಿಯೇ ಕ್ಲೈಮ್‌ನ್ನು ಪರಿಶೀಲಿಸಲಾಗುತ್ತದೆ.

ನಿಮ್ಮ ವಾಹನಕ್ಕೆ 'ಡ್ರೈವ್ ಮಾಡಿದಷ್ಟೇ ಪಾವತಿ' ಸ್ಲಾಬ್ ಪರಿಗಣಿಸುವ ಸಂದರ್ಭದಲ್ಲಿ ಗಮನಿಸಬೇಕಾದ ಪ್ರಮುಖ ಅಂಶಗಳು:

**ಒಂದಕ್ಕಿಂತ ಹೆಚ್ಚು ಕಾರು ಇದ್ದರೆ:** ನಿಮ್ಮ ಬಳಿ ಒಂದಕ್ಕಿಂತ ಹೆಚ್ಚು ಕಾರು ಇದ್ದರೆ ಅತಿ ಕಡಿಮೆ ಬಳಕೆ ಮಾಡುವ, ಸಾಮಾನ್ಯವಾಗಿ ವರ್ಷಕ್ಕೆ 7500ರಿಂದ 10000 ಕಿ.ಮೀ. ದೂರ ಪ್ರಯಾಣಿಸುವ ಕಾರಿಗೆ ಮಾತ್ರ 'ಡ್ರೈವ್ ಮಾಡಿದಷ್ಟೇ ಪಾವತಿ' (PAYD) ವಿಮೆಯನ್ನು ಖರೀದಿ ಮಾಡುವುದು ಉತ್ತಮ.

**ಕಾರಿನ ಬಳಕೆ:**

ನೀವು ವಾರ್ಷಿಕವಾಗಿ 7500ರಿಂದ 10000 ಕಿ.ಮೀ. ವ್ಯಾಪ್ತಿಯ ಒಳಗೇ ಕಾರನ್ನು ಬಳಸಿದ್ದರೆ ಅಥವಾ ಕಚೇರಿಗೆ ತೆರಳಲು ಸಾರ್ವಜನಿಕ ಸಾರಿಗೆಯನ್ನು ಬಳಸುತ್ತಿದ್ದರೆ ಅಥವಾ ನೀವು ಆಗಾಗ ಪಟ್ಟಣದಿಂದ ಹೊರಗೆ ಪ್ರಯಾಣ ಮಾಡುತ್ತಿದ್ದು ಕಾರನ್ನು ಕಡಿಮೆ ಬಳಸುತ್ತಿದ್ದರೆ ಆಗ 'ಡ್ರೈವ್ ಮಾಡಿದಷ್ಟೇ ಪಾವತಿ' (PAYD) ಕಾರು ವಿಮೆ ಪಾಲಿಸಿಯನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ.


INSPIRE INDIA
WEALTH PVT LTD
ಹೂಡಿಕೆ ವೇಳೆ -ನೆನಪಿರಲಿ ಇನ್‌ಸ್ಪೈರ್ ಇಂಡಿಯಾ ಎಎಂಎಫ್‌ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು




ಹಕ್ಕು ನಿರಾಕರಣೆ

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆ ಮಾಡುವ ಸಮರ್ಪಕತೆ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆ ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.



ಇನಸ್ಪೈರ್ ಇಂಡಿಯಾ ವೆಲ್ತ್ ಪ್ರೈ.ಲಿ.
#65, ಸುರಾಸ ಎನ್‌ಕ್ಲೇವ್, ಮೊದಲ ಮಹಡಿ
ಪುಟ್ಟಣ್ಣ ರಸ್ತೆ, ಗಾಂಧಿ ಬಜಾರ್,
ಬಸವನಗುಡಿ, ಬೆಂಗಳೂರು -560004
9035414414, 080-42129917
info@inspireindiafs.com